 

# ಕೇದಾರ, ಬದರಿ ಯಾತ್ರೆಯ ಅನುಭವ

**ಟಿ.ವಿ.ಮಧುಪ್ರಭಾ ಲೋಕೇಶ್**

ಪುಣ್ಯಕ್ಷೇತ್ರಗಳಿಗೆ ಯಾತ್ರೆ ಹೋಗುವುದು ಅನೇಕ ಬಾರಿ ಹಲವು ಬಗೆಯ ಅಪಾಯಕರ ಸನ್ನಿವೇಶಗಳಿಂದ ಕೂಡಿರುತ್ತವೆ. ಹಲವು ಅನಾಹುತಗಳೂ ಸಂಭವಿಸುವುದುಂಟು. ಭಗವಂತನನ್ನೇ ಆಶ್ರಯಿಸಿ ಯಾತ್ರೆ ಹೋಗುವ ಭಕ್ತರು ಹೇಗೆ ಎಲ್ಲ ಗಂಡಾಂತರಗಳಿಂದಲೂ ಪಾರಾಗುತ್ತಾರೆ ಎಂಬುದನ್ನು ಹಲವರ ಅನುಭವ ಕಥನಗಳು ತಿಳಿಸಿಕೊಡುತ್ತವೆ. ಅಂಥ ಒಂದು ಅನುಭವವನ್ನು ನಿರೂಪಿಸಿರುವ ಲೇಖಕಿ, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಅವರು ಮಹಿಳಾ ಮತ್ತು ಮಕ್ಕಳ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಈಗ ನಿವೃತ್ತರಾಗಿದ್ದಾರೆ.

ಶ್ರೀರಾಮಕೃಷ್ಣರ ಪ್ರೇರಣೆಯಂತೆ ನನಗೆ ದ್ವಾದಶ ಜ್ಯೋತಿರ್ಲಿಂಗಗಳ ದರ್ಶನ ಪಡೆಯುವಂತಾಗಿದ್ದು, ಕಳೆದ ನಾಲ್ಕು-ಐದು ವರ್ಷಗಳಲ್ಲಿ ನಾನು ೧೧ ಜ್ಯೋತಿರ್ಲಿಂಗಗಳನ್ನು - ಗುಜರಾತ್, ಮಹಾರಾಷ್ಟ್ರ, ಮಧ್ಯಪ್ರದೇಶ, ಉತ್ತರಪ್ರದೇಶ ಹಾಗೂ ತಮಿಳುನಾಡಿನ ಶಿವಲಿಂಗಗಳ ದರ್ಶನವನ್ನು ಪಡೆದಿರುತ್ತೇನೆ.

ನನ್ನ ಉತ್ತರಾಖಂಡದ ಕೇದಾರನಾಥೇಶ್ವರ ಶಿವಲಿಂಗದ ದರ್ಶನ ಬಹಳ ಪ್ರಯಾಸಕರವಾಗಿದ್ದು, ಕಳೆದ ಎರಡು ವರ್ಷಗಳ ಪ್ರಯತ್ನದಿಂದ ಇದೀಗ ಸಫಲವಾಯಿತು. ಕೋವಿಡ್ ಸಾಂಕ್ರಾಮಿಕ ರೋಗದ ಹಿನ್ನೆಲೆ ಹಾಗೂ ಕೇದಾರನಾಥವು ವರ್ಷದಲ್ಲಿ ೬ ತಿಂಗಳು ಮಾತ್ರ ಭಕ್ತರಿಗೆ ದರ್ಶನಕ್ಕೆ ಲಭ್ಯವಾಗಿದ್ದು, ಈ ನಮ್ಮ ಪ್ರವಾಸ ಸ್ವಲ್ಪ ತಡವಾಗಿತ್ತು. ಶ್ರೀರಾಮಕೃಷ್ಣರ ದಯೆಯಿಂದ ನಾವು ಏಪ್ರಿಲ್ ೨೨ರಿಂದ ಪ್ರಯತ್ನಿಸಿ, ಯಾತ್ರೆ ಮುಗಿಯುವ ಹಂತದಲ್ಲಿ ನನಗೆ ದರ್ಶನ ಲಭ್ಯವಾಯಿತು. ಈ ಯಾತ್ರೆ ಪೂರೈಸಿದ್ದಕ್ಕೆ ನಾನು ಗುರುಗಳಿಗೆ ಋಣಿಯಾಗಿದ್ದೇನೆ.

ನಾವು ಮೊದಲು ಮೈಸೂರು ಶ್ರೀರಾಮಕೃಷ್ಣರ ಆಶ್ರಮದ ಯತಿವರೇಣ್ಯರ ಆಶೀರ್ವಾದ ಪಡೆದು ಮೈಸೂರಿನಿಂದ ಕಾರಿನಲ್ಲಿ ಬೆಂಗಳೂರಿನ ವಿಮಾನ ನಿಲ್ದಾಣಕ್ಕೆ ಪ್ರಯಾಣ ಬೆಳಸಿದೆವು. ಬೆಂಗಳೂರಿನಲ್ಲಿ ನಿಗದಿತ ವಿಮಾನವನ್ನು ಹತ್ತಿ ಡೆಹರಾಡೂನ್‌ಗೆ ಹೊರಟೆವು. ಬೆಳಗಿನ ಜಾವದ ವಿಮಾನಯಾನ ಮೋಡಗಳ ನಡುವೆ. ಸುಂದರ ಬೆಳ್ಳಿಮೋಡಗಳ ನಡುವೆ ಸುಂದರ ಚಂದಿರನ ಆಗಮನ ಮನಸ್ಸಿಗೆ ಉಲ್ಲಾಸ ಕೊಟ್ಟಿತು.

ಡೆಹರಾಡೂನ್ ತಲುಪಿದ ನಂತರ ನಾವು ನಿಗದಿತ ವಾಹನದಲ್ಲಿ ನಾವು ಗುಪ್ತಕಾಶಿಗೆ ಪ್ರಯಾಣ ಬೆಳಸಿದೆವು. ದಾರಿಯುದ್ದಕ್ಕೂ ಸುಂದರ ಹಸಿರು ಬೆಟ್ಟಗುಡ್ಡಗಳು, ಅಲ್ಲಲ್ಲಿ ನೀರಿನ ಚಿಲುಮೆಗಳು, ಪರ್ವತ ಶ್ರೇಣಿಗಳು ಸಾಲುಸಾಲು ಭಕ್ತರುಗಳ ಬಣ್ಣಬಣ್ಣದ ವಾಹನಗಳು. ಕೆಲವೊಮ್ಮೆ ಅಲ್ಲಲ್ಲಿ ಬೆಟ್ಟಗುಡ್ಡಗಳ ಕುಸಿಯುವಿಕೆಯನ್ನು ನೋಡಿ ಹೆದರಿದೆವು. ಶ್ರೀರಾಮಕೃಷ್ಣರ ಧ್ಯಾನ-ಜಪಗಳನ್ನು ಮಾಡುತ್ತಾ ಇಡೀದಿನ ರಾತ್ರಿಯವರೆಗೂ ನಾವು ಪ್ರಯಾಣ ಮಾಡಿ, ಗುಪ್ತಕಾಶಿಯನ್ನು ತಲುಪಿದೆವು.

ಗುಪ್ತಕಾಶಿಯು ಪವಿತ್ರ ಸ್ಥಳವಾಗಿದ್ದು, ಶಿವನು ಪಾಂಡವರಿಗೆ ಸಿಗದಂತೆ ಈ ಸ್ಥಳದಲ್ಲಿ ಬಂದು ನೆಲೆಸಿರುವ ಹಿನ್ನೆಲೆ ಇದ್ದು, ಇಲ್ಲಿ ಕೂಡ ಶಿವನ ದೇವಸ್ಥಾನವಿದೆ.

ಬೆಳಿಗ್ಗೆ ಬೇಗನೆ ಎದ್ದು ನಮ್ಮ ದೈನಂದಿನ ಕಾರ್ಯಗಳನ್ನು ಮುಗಿಸಿ, ಶ್ರೀರಾಮಕೃಷ್ಣ, ಶಾರದಾಮಾತೆ ಹಾಗೂ ಸ್ವಾಮೀಜಿಯವರ ಧ್ಯಾನಗಳನ್ನು ಮಾಡಿ, ಕೇದಾರನಾಥೇಶ್ವರನ ದರ್ಶನಕ್ಕಾಗಿ ಅಲ್ಲಿಯೇ ಸಮೀಪದಲ್ಲಿ ನಿಗದಿಯಾಗಿದ್ದ ಹೆಲಿಕಾಪ್ಟರನ್ನು ಮೊದಲ ಬಾರಿ ಹತ್ತಿದೆವು. ನಮ್ಮ ಸಂತಸ ಹೇಳತೀರದು.

ಗುಪ್ತಕಾಶಿಯಿಂದ ಕೇದಾರನಾಥಕ್ಕೆ ಹೆಲಿಕಾಪ್ಟರ್ ಮೂಲಕ ಕೇವಲ ೧೫ ನಿಮಿಷಗಳಲ್ಲಿ ಕ್ರಮಿಸಿದೆವು. ಈ ಪ್ರವಾಸವು ಬಹಳ ಹೊಸದಾಗಿತ್ತು. ಮೊದಲಬಾರಿಗೆ ಹೆಲಿಕಾಪ್ಟರನ್ನು ಹತ್ತಿದ್ದೆವು. ಸುತ್ತಲಿನ ಹಿಮವದ್ ಪರ್ವತಗಳು, ಬೆಟ್ಟಗುಡ್ಡಗಳು, ಬೆಳ್ಳಿ ಮೋಡಗಳು, ಹಸಿರು ವನಸಿರಿ, ಸೂರ್ಯನ ಪ್ರಖರತೆ, ನೀರಿನ ಜಲಪಾತಗಳು, ಕೆಳಗೆ ಪಾತಾಳದ ದೃಶ್ಯಗಳು, ಕೊರೆಯುವ ಚಳಿ ಇಂತಹ ಅನುಭವವನ್ನು ನಾವು ಆಸ್ವಾದಿಸುತ್ತಾ ನಮ್ಮ ಮೊಬೈಲಿನಲ್ಲಿ ಸೆರೆಹಿಡಿದು ಸಂತಸಪಟ್ಟೆವು. ಇದು ನಮ್ಮ ಜೀವನದ ಅತ್ಯಂತ ಮಧುರ ಕ್ಷಣವೆಂದರೆ ತಪ್ಪಾಗದು. ಶ್ರೀರಾಮಕೃಷ್ಣರಿಗೆ ಕೋಟಿ ವಂದನೆಗಳನ್ನು ಮನದಲ್ಲಿ ಅರ್ಪಿಸುತ್ತ ಕೇದಾರನಾಥನ ಸನ್ನಿಧಿಯನ್ನು ತಲುಪಿದೆವು.

ನಾವು ತಲುಪಿದ ಸಮಯದಲ್ಲಿ ಸೂರ್ಯನು ಬಹಳ ಪ್ರಕಾಶಮಾನನಾಗಿದ್ದು ನಮಗೆ ಬಹಳ ಸಂತಸ ತಂದಿತ್ತು. ಸುಂದರ ದೃಶ್ಯಗಳು ನನಗೆ ಸ್ವರ್ಗದ ಅನುಭವ ತಂದುಕೊಟ್ಟಿತು. ಆದರೆ ಕೆಲವೇ ಕ್ಷಣದಲ್ಲಿ ಹವಾಮಾನ ವೈಪರೀತ್ಯವು ನಮಗೆ ಗೋಚರಿಸಿದ್ದು, ದಿಢೀರನೆ ಆಕಾಶದಲ್ಲಿ ಕಪ್ಪುಮೋಡಗಳು ದಟ್ಟವಾಗಿ ಆಗಮಿಸಿ, ಹಿಮದ ಮಳೆ ಕೆಲವೇ ಕ್ಷಣದಲ್ಲಿ ಸುರಿಯಲಾರಂಭಿಸಿತು.

ನನಗೆ ಇದು ಬಹಳ ಹೊಸದಾಗಿತ್ತು. ನಾವು ದಿಗ್ಭ್ರಾಂತರಾದೆವು. ಕೊರೆಯುವ ಚಳಿ; ಕತ್ತಲು ಆವರಿಸಿತು. ಆಗಲೇ ಸುದ್ದಿಯೊಂದು ಬಂತು, ನಮ್ಮನ್ನು ಕರೆತಂದ ಹೆಲಿಕಾಪ್ಟರ್ ಬೆಂಕಿಗೆ ಆಹುತಿ ಯಾಗಿದೆ ಎಂದು. ಇದನ್ನು ಕೇಳಿ ನಮ್ಮ ಮನಸ್ಸು ಮುದುಡಿತು. ನಾವು ಇನ್ನೂ ದೇವಾಲಯ, ಪ್ರಾಕಾರಕ್ಕೆ ತಲುಪಬೇಕಾದರೆ ೩-೪ ಕಿ.ಮೀ. ನಡೆಯಬೇಕಾಗಿದೆ. ನಮ್ಮ ಸಂಬಂಧಿಕರು, ಆತ್ಮೀಯರು ಗಳು ಈ ಅವಘಡದ ಬಗ್ಗೆ ದೂರದರ್ಶನದಲ್ಲಿ ನೋಡಿ ಹೆದರಿ ಕರೆಮಾಡಲಾರಂಭಿಸಿದರು. ಅವರೆಲ್ಲರಿಗೂ ಗುರುಗಳ, ಮಾತೆಯ ವರ ಹಾಗೂ ಸ್ವಾಮೀಜಿಯ ಆಶೀರ್ವಾದದಿಂದ ನಾವುಗೆಳಲ್ಲರೂ ಸೌಖ್ಯವಾಗಿರುವ ಬಗ್ಗೆ ತಿಳಿಸಿದೆವು. ಅಷ್ಟರಲ್ಲಿ ಇಡೀ ದಿನ ಹೆಲಿ ಕಾಪ್ಟರ್ ಸೇವೆಯನ್ನು ಸ್ಥಗಿತಗೊಳಿಸಿರುವ ಬಗ್ಗೆ ವರದಿ ಬಂದು, ನಮಗೆ ವಾಪಸ್ಸು ಹೊಗಲು ತೊಂದರೆಯಾಯಿತು. ನಾವು ಧ್ಯಾನಿ ಸುತ್ತಾ ಕೇದಾರನಾಥನ ದೇವಾಲಯದ ಪ್ರಾಂಗಣದ ಹತ್ತಿರ ಬಂದೆವು.

ಭಕ್ತರ ಸಾಗರ, ಲಕ್ಷಾಂತರ ಜನರು, 'ಹರ ಹರ ಮಹಾದೇವ' ಎಂದು ಕೂಗುತ್ತ ಸರದಿ ಸಾಲಿನಲ್ಲಿ ಕೈಯಲ್ಲಿ ಕೋಲು, ಛತ್ರಿ ಹಾಗೂ ಕೋಟುಗಳನ್ನು ಧರಿಸಿ, ಚಳಿ, ಮಳೆಯನ್ನು ಗಮನಿಸದೆ ಮೈಮರೆತು ಶಿವನ ಧ್ಯಾನದಲ್ಲಿ ಲೀನರಾಗಿದ್ದರು. ನಾವು ಸರದಿ ಸಾಲಿನಲ್ಲಿ ನಿಂತೆವು. ಸುಮಾರು ೧-೨ ಘಂಟೆಯ ನಂತರ ದೇವ ಸ್ಥಾನದ ಗೋಪುರ ಕಂಡು ಸಂಭ್ರಮಿಸಿದೆವು. ಸಾವಿರಾರು ಭಕ್ತರು ಆಗಮಿಸಿದ್ದು, ಸ್ವರ್ಗವೇ ಧರೆಗಿಳಿದಂತೆ ಕಂಡು ಬಂತು. ಸುತ್ತಲ ಸುಂದರ ಹಿಮಪರ್ವತಗಳು, ಕೊರೆಯುವ ಚಳಿ, ಶಿವನ ನಾದ, ಯತಿಗಳು ಪಠಿಸುತ್ತಿದ್ದ ಶಿವನ ಪುರಾಣಗಳು, ಆ ಸ್ಥಳದ ಮಹಿಮೆ ಯನ್ನು ಪ್ರದರ್ಶಿಸುತ್ತಿದ್ದವು.

ಮಹಾಭಾರತದ ಯುದ್ಧದಲ್ಲಿ ಪಾಂಡವರು ಕೌರವರನ್ನು, ಹಿರಿಯ ಬಂಧುಗಳನ್ನು ಹತ್ಯೆಮಾಡಿ, ಆ ಹತ್ಯೆಯಿಂದ ಉಂಟಾದ ಪಾಪಕ್ಕೆ ಪರಿಹಾರಾರ್ಥವಾಗಿ ಶಿವನ ಪೂಜೆಯನ್ನು ಸಲ್ಲಿಸಲು ಕಾಶಿಗೆ ಹೋಗುತ್ತಾರೆ. ಆದರೆ ಇವರ ಈ ಕೃತ್ಯದಿಂದ ಶಿವನಿಗೆ ಕೋಪ ಬಂದು, ಅವರ ಪೂಜೆ ಸ್ವೀಕರಿಸಲು ಇಚ್ಛಿಸದೆ ವೇಷವನ್ನು ಮರೆಸಿಕೊಂಡು ಗುಪ್ತಕಾಶಿಗೆ ಹೊರಡುತ್ತಾನೆ.

ಹಾಗೆಯೇ ಅಲ್ಲಿಗೂ ಪಾಂಡವರು ಬಂದಾಗ ಶಿವನು ಹಸು ಗಳ ಗುಂಪಿನಲ್ಲಿ ಗೂಳಿ ವೇಷದಲ್ಲಿ ಸೇರಿಕೊಂಡ. ಭೀಮಸೇನನಿಗೆ ಅನುಮಾನ ಬಂದು ತನ್ನ ಎರಡು ಕಾಲುಗಳನ್ನು ಎರಡು ಪರ್ವತ ಗಳ ಮಧ್ಯೆ ಇಡುತ್ತಾನೆ. ಗೋವುಗಳು ಅವನ ಕಾಲುಗಳ ಮಧ್ಯ ದಲ್ಲಿ ನುಸುಳಿ ಹೋಗುತ್ತದೆ. ಆದರೆ ಒಂದು ಗೂಳಿ ಹೋಗದೆ ನಿಲ್ಲುತ್ತದೆ. ಆಗ ಭೀಮಸೇನನು ತನ್ನ ಅನುಮಾನ ಸರಿ ಎಂದು ತಿಳಿದು ಅವನೇ ಶಿವ ಎಂದು ಗೂಳಿಯ ಗೂನನ್ನು ಮೇಲೆಕ್ಕೆ ಎತ್ತು ತ್ತಾನೆ. ಇದುವೇ 'ಕೇದಾರನಾಥ'. ಕೇದಾರನಾಥೇಶ್ವರ ಲಿಂಗವು ಗೂಳಿಯ ಗೂನಿನ ಆಕಾರದಲ್ಲಿದೆ. ಈ ದೇವಾಲಯದ ಹಿಂದೆ ಮಂದಾಕಿನೀ ನದಿಯು ಮಂದಗತಿಯಲ್ಲಿ ಹರಿಯುತ್ತದೆ.

ದೇವಸ್ಥಾನ ಕಲ್ಲಿನಿಂದ ಕೂಡಿದ ರಚನೆಯಾಗಿದೆ. ದೇವರ ದರ್ಶನ ನಮಗೆ ಕೈಲಾಸದ, ಸ್ವರ್ಗದ ಅನುಭವ ತಂದುಕೊಟ್ಟಿತು. ದೇವರ ದರ್ಶನದಿಂದ ನನಗೆ ಬಹಳ ಸಂತಸವುಂಟಾಗಿ, ಭಕ್ತಿಯು ಇಮ್ಮಡಿಯಾಯ್ತು. ಇಲ್ಲಿನ ಅರ್ಚಕರು ವೀರಶೈವ ಲಿಂಗಾ ಯತರು. ಅವರು ಕರ್ನಾಟಕದವರಾಗಿದ್ದು ಒಂದು ವಿಶೇಷತೆ. ಇಲ್ಲಿಯ ದೇವರಿಗೆ ಅಭಿಷೇಕ, ನೀರು ಇತ್ಯಾದಿ ಹಾಕುವಂತಿಲ್ಲ, ಬದಲಿಗೆ ತುಪ್ಪವನ್ನು ಹಾಕುವರು. ಇಲ್ಲಿನ ದೇವರು ಬಹಳ ಪ್ರಸಿದ್ಧವಾಗಿದ್ದು, ಪವಿತ್ರ ಜ್ಯೋತಿರ್ಲಿಂಗವಾಗಿದೆ. ಈ ದೇವಾ ಲಯವನ್ನು ಪಾಂಡವರು ನಿರ್ಮಿಸಿದರು ಎನ್ನುತ್ತಾರೆ.

ದೇವಾಲಯದ ಮುಂದೆ ಪಾಂಡವರು, ಕೃಷ್ಣ ಹಾಗೂ ವೀರ ಭದ್ರರ ಮೂರ್ತಿಗಳಿವೆ. ದೇವಾಲಯದ ಹಿಂಭಾಗದ ಗುಹೆಯಲ್ಲಿ ಶಂಕರಾಚಾರ್ಯರು ಅಂತರ್ಧಾನರಾದರೆಂಬ ಹಿನ್ನೆಲೆ ಇದೆ.

ಈ ದೇವಾಲಯವು ಯಾವುದೇ ಅವಘಡಗಳಿಗೂ ಸಿಲುಕದೆ ಶಿವಲಿಂಗವು ಹಾಳಾಗದೇ ಇರುವ ಬಗ್ಗೆ, ಕ್ಷೇತ್ರದ ಪಾವಿತ್ರ್ಯದ ಬಗ್ಗೆ ತಿಳಿದು ನಮಗೆ ಬಹಳ ಧನ್ಯತಾಭಾವವುಂಟಾಗಿ, ಈ ಜ್ಯೋತಿ ರ್ಲಿಂಗದ ದರ್ಶನಕ್ಕೆ ನಮ್ಮನ್ನು ಪ್ರೇರೇಪಿಸಿದ ಶ್ರೀರಾಮಕೃಷ್ಣರು, ಶ್ರೀಮಾತೆ, ಸ್ವಾಮೀಜಿಯವರಿಗೆ ಧನ್ಯತಾ ಭಾವ ಸಮರ್ಪಿಸಿದೆವು.

ಪ್ರಸಾದ ಹಾಗೂ ತಪೋವನದ ರುದ್ರಾಕ್ಷಿಗಳನ್ನು ಪಡೆದು ನಾವು ಇಲ್ಲಿಂದ ಮುಂದೆ ಯಾವ ರೀತಿಯಲ್ಲಿ ಪ್ರಯಾಣಿಸಬಹು ದೆಂಬ ಬಗ್ಗೆ ಮೈಸೂರಿನ ಆಶ್ರಮ ಯತಿವರೇಣ್ಯರನ್ನು ಸಂಪರ್ಕಿಸಿ ದೆವು. ನಡೆಯುವುದು ಅಥವಾ ಕುದುರೆಗಳ ಸಹಾಯದಿಂದ ಗೌರೀಕುಂಡಕ್ಕೆ ತೆರಳುವಂತೆ ತಿಳಿಸಿದರು. ಅಲ್ಲಿಯ ತಾಪಮಾನ -೮ ಡಿಗ್ರಿ ಸೆಂಟಿಗ್ರೇಡ್ ಇದ್ದು ಆಮ್ಲಜನಕ ತೊಂದರೆಯಾಗುವ ಸಾಧ್ಯತೆ ಜಾಸ್ತಿ ಇದ್ದು, ಬೇಗನೆ ಕೆಳಗೆ ಬಂದು ಬೇರೆ ವ್ಯವಸ್ಥೆ ಮಾಡಿ ಬರುವಂತೆ ತಿಳಿಸಿ, ನಮಗೆ ಒಳಿತಾಗಲೆಂದು ಹಾರೈಸಿದರು.

ಎಲ್ಲರ ಸಲಹೆಯಂತೆ ಸುಮಾರು ೩-೪ ಕಿ.ಮೀ. ಕೆಳಗೆ ಬಂದೆವು. ಅಲ್ಲಿ ನಮಗೆ ಕುದುರೆಗಳು ಸಿಕ್ಕಿ, ಮೊದಲನೆಯ ಬಾರಿಗೆ ಕುದುರೆ ಸವಾರಿ ನಮಗೆ ಲಭ್ಯವಾಯ್ತು. ಸುಮರು ೨೦-೨೫ ಕಿ.ಮೀ. ನಾವು ಕುದುರೆ ಏರಿ ಬರಬೇಕಾಗಿದ್ದು ಅದರ ಅನುಭವವಂತೂ ಹೇಳಲು ಸಾಧ್ಯವಿಲ್ಲ. ಇಕ್ಕಟ್ಟಾದ ಜಾಗ, ಸುತ್ತಲೂ ಕುದುರೆಯಲ್ಲಿ ರುವ ಭಕ್ತರು, ಪಕ್ಕದಲ್ಲಿಯೇ ನಡೆಯುತ್ತಿರುವ ಭಕ್ತರು, ಬೀಡಾಡಿ ಕುದುರೆಗಳು, ಕೆಲವು ಓಡುತ್ತಿವೆ, ನಡೆಯುತ್ತಿವೆ, ಭಕ್ತರ ಆಕ್ರಂ ದನ, ನಿಸ್ಸಹಾಯಕತೆ, ಮಹಿಳೆಯರ ಚೀರಾಟ, ಹಳ್ಳಕೊಳ್ಳಗಳು, ಕಲ್ಲುಗಳು, ಕೊರೆಯುವ ಚಳಿ, ಮಳೆ, ಕುದುರೆಗಳ ಎಳೆದಾಟ, ಕುದುರೆಗಳನ್ನು ಹರೆಯದ ಹುಡುಗರು ನಡೆಸಿಕೊಂಡು ಬರುತ್ತಿರು ವುದು, ಸುಮಾರು ರಾತ್ರಿ ೧೦.೩೦ರವರೆಗೂ ಕುದುರೆಯ ಪ್ರಯಾಣ. ನನ್ನೊಡನೆ ಆಶ್ರಮದ ಆಪ್ತರೊಬ್ಬರು ಕೂಡ ಇದ್ದರು. ಅವರನ್ನು ಮಾನವ ನಿರ್ಮಿತ 'ಡೋಲಿ'ಯಲ್ಲಿ ಹತ್ತಿಸಿ ಅವರನ್ನು ಕೆಳಗೆ ಕರೆ ತಂದೆವು. ೧೦.೩೦ ನಂತರದ ನಮ್ಮ ಪ್ರಯಾಣ ಬಹಳ ಕಷ್ಟಕರ ವಾಗಿತ್ತು. ಶ್ರೀರಾಮಕೃಷ್ಣರ, ಧ್ಯಾನ ಮಾಡುತ್ತ ಕಷ್ಟಕರವಾದ ಪ್ರಯಾಣ ಮಾಡಿದೆವು. ಕಗ್ಗತ್ತಲು, ಕೊಚ್ಚೆ, ಮಳೆಯಲ್ಲಿ ದೀಪ ವಿಲ್ಲದೆ ನಡೆಯುತ್ತ ಬಂದೆವು. ಇಂತಹ ದುರ್ಗಮ ದಾರಿಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ನಮ್ಮನ್ನು ಕರೆತಂದ ರಾಮಕೃಷ್ಣರಿಗೆ, ಜಪ-ಧ್ಯಾನದೊಂದಿಗೆ ವಂದಿಸಿದೆವು.

ಕೆಳಗೆ ಗೌರೀಕುಂಡಕ್ಕೆ ಬಂದ ನಮಗೆ ಬಾಯಾರಿಕೆ, ಹಸಿವೆಯೇ ಆಗಿರಲಿಲ್ಲ. ಗೌರೀಕುಂಡದಲ್ಲಿ ಸಹ ಪ್ರಯಾಣಿಕರೆಲ್ಲರೂ ಒಟ್ಟು ಗೂಡಲು ಬಹಳ ಸಮಯ ಹಿಡಿಯಿತು. ಎಲ್ಲರೂ ದೈವಾನುಗ್ರಹ ದಿಂದ ಸುರಕ್ಷಿತವಾಗಿ ತಲುಪಿದೆವು.

ಅಲ್ಲಿಂದ ಮುಂದೆ ೨ ಕಿ.ಮೀ. ಕಾಲುನಡಿಗೆಯ ನಂತರ ಸೋನ್‌ಪ್ರಯಾಗಕ್ಕೆ ವಾಹನ ಹಿಡಿದು ಹೊರಟೆವು. ಸೋನ್ ಪ್ರಯಾಗ ತಲುಪಿ, ಅಲ್ಲಿಂದ ಗುಪ್ತಕಾಶಿಗೆ ವಾಹನ ದೊರೆತು, ಎಲ್ಲರೂ ಮಧ್ಯರಾತ್ರಿ ಸಮಯಕ್ಕೆ ಗುಪ್ತಕಾಶಿಯನ್ನು ತಲುಪಿದೆವು. ಆಯಾಸಗೊಂಡಿದ್ದ ಎಲ್ಲರೂ ವಿಶ್ರಮಿಸಿಕೊಂಡೆವು.

ಇಂತಹ ಪ್ರಯಾಣ ಎಲ್ಲರಿಗೂ ಹೊಸದಾಗಿದ್ದು ಬಹಳ ದಣಿ ದಿದ್ದೆವು. ಬೆಳಿಗ್ಗೆ ಎದ್ದು ದೈನಂದಿನ ಕಾರ್ಯಗಳನ್ನು ಮುಗಿಸಿ ಬದರೀನಾಥಕ್ಕೆ ಪ್ರಯಾಣ ಬೆಳಸಿದೆವು.

ದಾರಿಯಲ್ಲಿ ಊಖೀಮಠದ ಓಂಕಾರೇಶ್ವರ ದೇವಾಲಯಕ್ಕೆ ಭೇಟಿ ನೀಡಿ, ಅಲ್ಲಿ ಅಭಿಷೇಕ ಹಾಗೂ ಪೂಜೆಯನ್ನು ಸಲ್ಲಿಸಿದೆವು. ಈ ದೇವಾಲಯವು ಬಹಳ ಪ್ರಾಚೀನವಾಗಿದ್ದು, ಕೇದಾರನಾಥನ ಉತ್ಸವ ಮೂರ್ತಿಯನ್ನು ಅಲ್ಲಿ ಮುಚ್ಚಿರುವ ವೇಳೆಯಲ್ಲಿ ಈ ದೇವ ಸ್ಥಾನಕ್ಕೆ ತಂದು ಪೂಜೆ ಸಲ್ಲಿಸುತ್ತಿರುವುದಾಗಿ ತಿಳಿದುಬಂತು.

ಈ ದಿನವೂ ಪೂರ್ತಿ ಪ್ರಯಾಣ. ಸುತ್ತಲೂ ಕಾಡುಮೇಡಗಳು ಬೆಟ್ಟಗುಡ್ಡಗಳು, ನೀರಿನ ಚಿಲುಮೆಗಳು, ಹಿಮದಿಂದ ಕೂಡಿದ ಪರ್ವತಗಳು; ಕೆಲವೊಮ್ಮೆ ಸೂರ್ಯನ ಬೆಳಕು, ತಡೆಯಲಾಗ ದಂತಹ ಕೊರೆಯುವ ಚಳಿ ಇವುಗಳಿಂದ ಕೂಡಿತ್ತು, ನಮ್ಮ ಪ್ರಯಾಣ. ಗುರುಗಳ ಆಶೀರ್ವಾದದಿಂದ ನಾವು ರಾತ್ರಿಯಾದ ನಂತರ, ಇಡೀ ದಿನದ ಪ್ರಯಾಣ ಮುಗಿಸಿ ಬದರೀನಾಥಕ್ಕೆ ಬಂದೆವು. ಅಲ್ಲಿ ನಮ್ಮ ಕೊಠಡಿಗಳಲ್ಲಿ ವಿಶ್ರಮಿಸಿದೆವು.

ಬೆಳಗ್ಗೆ ಬ್ರಾಹ್ಮೀ ಮುಹೂರ್ತದಲ್ಲಿಯೇ ಎದ್ದು ಸ್ನಾನ ಮಾಡಿ ಬದರೀನಾಥನ ದರ್ಶನಕ್ಕೆ ತೆರಳಿದೆವು. ಸುಮಾರು ೨ ಕಿ.ಮೀ. ದೂರ ದಲ್ಲಿ ದೇವಸ್ಥಾನವಿದೆ. ಬಹಳ ಸುಂದರವಾದ ದೇವಸ್ಥಾನ ಅದು. ಸುತ್ತಲೂ ಪರ್ವತಗಳು, ಸೂರ್ಯನ ಪ್ರಖರತೆಯಿಂದ ಹೊಳೆಯು ತ್ತಿರುವ ಹಿಮಾಲಯ; ೧೫ ಡಿಗ್ರಿ ಸೆಂಟಿಗ್ರೇಡ್ ತಾಪಮಾನ, ವಿಪ ರೀತ ಚಳಿ. ಅಲ್ಲಲ್ಲಿ ಬೆಂಕಿ ಕಾಯಿಸುವವರು, ಸುತ್ತಲೂ ಅಂಗಡಿಗಳ ಸಾಲು, ಮಧ್ಯದಲ್ಲಿ ದೇವಸ್ಥಾನದ ಬಹಳ ಸುಂದರ ನೋಟ.

'ಅಲಕನಂದಾ' ನದಿ ತುಂಬಿ ಹರಿಯುತ್ತಿತ್ತು. ನೀರು ಕೊರೆಯು ತ್ತಿರುವ ಬಗ್ಗೆ ಭಕ್ತರು ತಿಳಿಸುತ್ತಿದ್ದರು. ಉತ್ತರಾಖಂಡದಲ್ಲಿ ಎಲ್ಲಾ ಕಡೆಯೂ ಶಿವನ ದೇವಾಲಯಗಳೇ. ನಾರಾಯಣ ಒಮ್ಮೆ ಇಲ್ಲಿಗೆ ಬಂದು ಶಿವನ ಅನುಗ್ರಹ ಪಡೆದು ಬದರಿಗೆ ತೆರಳಿ ಅಲ್ಲಿ ದೇವಾ ಲಯ ಸ್ಥಾಪಿಸಿರುವ ಹಿನ್ನೆಲೆಯಿದೆ. ಈ ವಿಷ್ಣುದೇವರ ದೇವಸ್ಥಾನದ ಬಹಳ ಪ್ರಸಿದ್ಧವಾಗಿದ್ದು ಭಕ್ತಜನರು ಸಾಗರೋಪಾದಿಯಲ್ಲಿ ನಾರಾ ಯಣನ ನಾಮ ಹಾಡುತ್ತ ಭಕ್ತಿಭಾವದಿಂದ ಸರದಿ ಸಾಲಿನಲ್ಲಿ ನಿಂತಿ ದ್ದರು. ನಾವುಗಳು ಸಹ ಸಾಲಿನಲ್ಲಿ ನಿಂತೆವು. ಅಲಕಾನಂದ ನದಿಯ ಪರಿಸರ, ಪಕ್ಕದಲ್ಲಿಯೇ ಯಾರೂ ಊಹಿಸದ ಬಿಸಿನೀರಿನ ಸೆಲೆ. ಅದರ ತಾಪಮಾನ ೫೫ ಡಿಗ್ರಿ ಸೆಂಟಿಗ್ರೇಡ್ ಇದ್ದು, ಬಿಸಿನೀರಿನ ಹಬೆ ಎದ್ದು ಕಾಣುತ್ತಿತ್ತು. ಇಲ್ಲಿಯ ಸ್ನಾನ ಬಹಳ ಆರೋಗ್ಯಕರ ಹಾಗೂ ಪವಿತ್ರವಾದುವೆಂದು ಭಕ್ತರ ನಂಬಿಕೆ.

ನಮ್ಮ ಸರದಿ ಸಾಲು ದೇವರ ಪ್ರಾಂಗಣ ತಲುಪಿತು. ದೇವರ ಪ್ರತಿಮೆಗಳು ಬಹಳ ಸುಂದರವಾಗಿದ್ದು, ವರ್ಣಿಸಲು ಸಾಧ್ಯವಿಲ್ಲ. ಧನ್ಯತಾಭಾವದಿಂದ ಮಿಂದು ಎದ್ದೆವು. ಸುತ್ತಲೂ ಹವನ ಹೋಮ ಪೂಜೆಗಳು ನಡೆಯುತ್ತಿದ್ದವು. ನಂತರ ಸುಂದರ ಲಕ್ಷ್ಮೀದೇವಿಯ ದರ್ಶನ ಪಡೆದು ಗುರುಗಳಿಗೆ ಮನಸ್ಸಿನಲ್ಲಿಯೇ ಧನ್ಯತೆ ಸಮ ರ್ಪಿಸಿ, ಹೊರಡಲಾಗದ ಸ್ಥಿತಿಯಲ್ಲಿ ಹೊರಟೆವು. ನಿಜಕ್ಕೂ ಇಂತಹ ದರ್ಶನ ನಮ್ಮ ಸೌಭಾಗ್ಯವೇ ಸರಿ ಎನಿಸಿದೆ.

ಬದರೀನಾಥನ ದರ್ಶನ ನಮಗೆ ನಿಜಕ್ಕೂ ಸ್ಫೂರ್ತಿನೀಡಿದ್ದು ಬಹಳ ಎತ್ತರದ ಹಿಮಾಲಯ ಪರ್ವತದಲ್ಲಿ ಈ ದೇವಾಲಯ ಇದ್ದುದು. ಅಲ್ಲಿ –೫ ಡಿಗ್ರಿ ಸೆಂಟಿ ಗ್ರೇಡ್ ತಾಪಮಾನವಿರುತ್ತದೆ. ಸೃಷ್ಟಿಯ ಈ ವೈಪರೀತ್ಯ ನಿಜಕ್ಕೂ ಅದ್ಭುತವಾಗಿದೆ.

ನಮ್ಮ ಪ್ರಯಾಣ ರುದ್ರಪ್ರಯಾಗದ ಕಡೆ ಹೊರಟಿತು. ಸರಿ ರಾತ್ರಿಯವರೆಗೂ ಪ್ರಯಾಣ. ಸುಂದರವಾದ ವನಸಿರಿ, ಪರ್ವತ ಶ್ರೇಣಿಗಳು, ನದಿಯ ಸಂಗಮಗಳನ್ನು ಗಮನಿಸುತ್ತಾ, ನಾವು ರುದ್ರಪ್ರಯಾಗ ತಲುಪಿ ವಿಶ್ರಮಿಸಿಕೊಂಡೆವು.

ಅಲಕನಂದಾ ಹಾಗೂ ಮಂದಾಕಿನೀ ನದಿಗಳ ಸಂಗಮ, ಡ್ಯಾಮ್ ಗಳನ್ನು ನೋಡಿ ತೃಪ್ತಭಾವದಿಂದ ದೇವರ ದರ್ಶನ ಪಡೆದು ಹೃಷಿಕೇಶಕ್ಕೆ ಪ್ರಯಾಣ ಬೆಳೆಸಿದೆವು. ಹೃಷಿಕೇಶದಲ್ಲಿ ನೀಲಕಂಠೇ ಶ್ವರ, ಲಕ್ಷ್ಮಣ್ ಝೂಲಾ, ನೀಲ್‌ಗರ್ ಜಲಪಾತ ಇವುಗಳನ್ನು ದೂರದಿಂದಲೇ ವೀಕ್ಷಿಸಿದೆವು.

ಹರಿದ್ವಾರಕ್ಕೆ ಹೊರಟು ಅಲ್ಲಿನ ಗಂಗಾರತಿಯನ್ನು ನೋಡಿ ದೆವು. ಭಕ್ತಿಭಾವದ ಆರತಿಯಲ್ಲಿ ನಾವು ಪೂರ್ಣವಾದ ಭಕ್ತಿಭಾವ ದಿಂದ ಮಿಂದೆದ್ದೆವು.

ದಕ್ಷಮಹಾರಾಜನ ದಕ್ಷ ಮಂದಿರಕ್ಕೆ ತೆರಳಿ ಅಲ್ಲಿ ಶಿವಪೂಜೆ ಯಲ್ಲಿ ಭಾಗವಹಿಸಿ, ಪ್ರಾರ್ಥನೆಯಲ್ಲಿ ತೊಡಗಿದೆವು. ಪಾರ್ವ ತಿಯು ಯಜ್ಞಲೀನವಾದ ಬಗ್ಗೆ ತಿಳಿದು ಆ ಪುಣ್ಯಸ್ಥಳವನ್ನು ವಂದಿಸಿ ಭಕ್ತಿಭಾವದಿಂದ ನಮಸ್ಕರಿಸಿ, ಪುಣ್ಯಾರ್ಚನೆ ಮಾಡಿಸಿದೆವು. ಈ ದೇವಾಲಯವು ಹರಿದ್ವಾರದಿಂದ ೪ ಕಿ.ಮೀ. ದೂರವಿದ್ದು ಪೂಜೆ ಮುಗಿಯುವಾಗ ರಾತ್ರಿ ಬಹಳ ತಡವಾಗಿದ್ದು, ನಮ್ಮ ಯೋಜನೆ ಯಂತೆ ಅಲ್ಲಿನ ಶ್ರೀರಾಮಕೃಷ್ಣರ ಆಶ್ರಮಕ್ಕೆ ಭೇಟಿ ನೀಡಲಾಗ ಲಿಲ್ಲ. ಇದು ಎಲ್ಲರಿಗೂ ಬೇಸರ ತಂದಿತ್ತು. ಆದರೆ ಸಮಯದ ಅಭಾವದಿಂದ ಅದು ಸಾಧ್ಯವಾಗಲಿಲ್ಲವೆಂದು, ಮನದಲ್ಲಿಯೇ ಶ್ರೀರಾಮಕೃಷ್ಣರಿಗೆ ವಂದಿಸುತ್ತಾ ಹೃಷಿಕೇಶಕ್ಕೆ ತೆರಳಿದೆವು.

ಬೆಳಿಗ್ಗೆ ೮ಗಂಟೆಗೆ ಡೆಹರಾಡೂನ್‌ನಿಂದ ಬೆಂಗಳೂರಿಗೆ ವಿಮಾನ ದಲ್ಲಿ ಹೊರಡಬೇಕಾಗಿದ್ದರಿಂದ ಬೇಗನೆ ಹೊರಟು ಡೆಹರಾಡೂನ್ ವಿಮಾನ ನಿಲ್ದಾಣಕ್ಕೆ ತಲುಪಿದೆವು. ಡೆಹರಾಡೂನ್‌ನಿಂದ ಬೆಂಗ ಳೂರಿಗೆ ಪ್ರಯಾಣ ಬೆಳಸಿದೆವು.

ಶ್ರೀರಾಮಕೃಷ್ಣರ, ಶಾರದಾಮಾತೆ ಹಾಗೂ ಸ್ವಾಮೀಜಿಯವರ ಆಶೀರ್ವಾದದಿಂದ ನಮ್ಮ ದ್ವಾದಶ ಜ್ಯೋತಿರ್ಲಿಂಗಗಳ ದರ್ಶನವು ಪೂರ್ಣಗೊಂಡಿದ್ದು ನಮಗೆಲ್ಲ ಅದು ಅತ್ಯಂತ ಸಂತಸ ನೀಡಿದೆ. ✽